MYSORE LEGISLATIVE ASSEMBLY

FORTY-FOURTH DAY.

Saturday, 27th June 1964.

The House met in the Assembly Hall, Vidhana Soudha, Bangalore, at Thirty minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Extent of Land irrigated under Nugu High Level Channel and Narasambudhi Tank in Nanjangud Taluk.

*Q.—518. **Sri N. RACHAIAH** (Nanjangud).—

Will the Government be pleased to state :—

(*a*) whether it is not a fact that 18,100 acres and 1,200 acres of lands are being irrigated under Nugu High Level Channel and Narasambudhi tank respectively in Nanjangud Taluk, Mysore District;

(*b*) whether it is also not a fact that due to untimely rains there was insufficient quantity of water in the reservoir and the Public Works Department had consequently let out water to the said lands only once in a week;

(*c*) whether they are aware that there was low yield of paddy crop and failure of crop completely in some places due to this;

(*d*) whether they are aware that the ryots of that area had brought this matter to the notice of the concerned authorities;

(*e*) whether they intend to exempt surcharge and revenue for the current year in the above said area ?

*A.—**Sri VEERENDRA PATIL** (Minister for Public Works) [On behalf of Sri S. NIJALINGAPPA (Chief Minister)].—

(*a*) In the Nanjangud taluk 16,559 acres under theNugu Right Bank High Level Canal and 1,210 acres under the Narasambudhi tank are being irrigated.

(*b*) Yes. The water supply was continuous till 31st August 1963; for 4 days 'ON' and 3 days 'OFF' from 1st September 1963 to 22nd October 1963, and 5 days 'ON' and 2 days 'OFF' from 23rd October 1963 till the end of the irrigation season.

(SRI VEERENDRA PATIL)

(*c*) There was no failure of crops. The yield was less than normal to a very small extent of land.

(*d*) The representations were received only about inadequate water supply in some reaches.

(*e*) In respect of a small area, this aspect is under examination in consultation with the Revenue Department.

ಶ್ರೀ ಎನ್. ರಾಚಯ್ಯ.—ನುಗು ಬಲದಂಡೆಯ ಮೇಲೆ ಮತ್ತು ನರಸಾಂಬುಧಿ ಕೆರೆಯಿಂದ ನೀರಾವರಿ ಮಾಡಲು ನರಿಯಾಗಿ ನೀರು ಕೊಡುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ನುಗು ಬಲದಂಡೆಯ ಮೇಲೆ ರಿಸರ್ವಾಯರಿನಲ್ಲಿ ಸ್ವಲ್ಪ ನೀರಿಲ್ಲದಾಗ ಈ ಭಾಗಗಳು ಸ್ವಲ್ಪ ಮಟ್ಟಿಗೆ ತೊಂದರೆಗೆ ಸಿಕ್ಕಿದೆ ಎಂದು ತಿಳಿದು ಬರುತ್ತದೆ.

ಶ್ರೀ ಎನ್. ರಾಚಯ್ಯ.—ಈ ಭಾಗದಲ್ಲಿ ಕೆಲವು ಕಡೆ ನಾಲ್ಕಾಣೆ ಭಾಗದಷ್ಟು ಮತ್ತು ಕೆಲವು ಕಡೆ ಎರಡಾಣೆ ಭಾಗದಷ್ಟು ಫಸಲು ಆಗದೆ ನಷ್ಟವಾಗಿರುವುದು ವಾರದಲ್ಲಿ ಎರಡು ಸಾರಿ ನೀರು ಕೊಡುವುದನ್ನು ನಿಲ್ಲಿಸಿರುವುದು, ಸರಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಈ ವಿಚಾರದಲ್ಲಿ ತಮ್ಮ ಇಲಾಖೆಗೂ ಹಾಗೂ ರೆವೆನ್ಯೂ ಇಲಾಖೆಗೂ ಮನವಿಗಳನ್ನು ನಲ್ಲಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ವಾರಕ್ಕೆ ಎರಡು ಸಾರಿ ನೀರು ಕೊಡಲು ರಿಸರ್ವಾಯರಿನಲ್ಲಿ ನೀರು ಕಡಿಮೆ ಬಂದಿರಬಹುದು ಅದರಿಂದಾಗಿ ನೀರು ಕೊಡದೆ ಇರಬಹುದು ! ನೀರು ನರಿಯಾಗಿ ರಿಸರ್ವಾಯರಿಗೆ ಬಂದ ಮೇಲೆ ನೀರು ನರಿಯಾಗಿ ಕೊಡಲು ತಕ್ಕ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎನ್. ರಾಚಯ್ಯ.—ಇಲ್ಲಿ ಭತ್ತದ ಬೆಳೆ ರೂಪಾಯಲ್ಲಿ ನಾಲ್ಕಾಣೆ ಭಾಗದಷ್ಟು ಅಥವಾ ಎರಡಾಣೆ ಭಾಗದಷ್ಟೂ ಕೂಡ ಆಗದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ರಿಪೋರ್ಟ್ ಬಂದಿರುವ ಪ್ರಕಾರ ನುಗು ಜಲಾಶಯದ ಕೆಳಗೆ 222 ಎಕರೆಗಳಿಗೆ ನೀರು ಮತ್ತು ನರಸಾಂಬುಧಿ ಕೆರೆಯ ಕೆಳಗೆ ಹತ್ತು ಎಕರೆಗಳಿಗೆ ನೀರು ಸಿಗುತ್ತಿರುವುದರಿಂದ ಅಲ್ಲಿ ಆಗಬೇಕಾದ ಬೆಳೆಯಲ್ಲಿ ಶೇಕಡಾ ಐವತ್ತಕ್ಕಿಂತ ಸ್ವಲ ಕಡಿಮೆ ಯೀಲ್ಡ್ ಬಂದಿದೆ ಎಂದು ಗೊತ್ತಾಗುತ್ತದೆ.

ಶ್ರೀ ಎನ್. ರಾಚಯ್ಯ.—ಇಲ್ಲಿ ಕಂದಾಯ ಹಾಗೂ ಸೆಸ್ಸನ್ನು ವಜಾ ಮಾಡಬೇಕೆಂದು ಮನವಿ ನಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದಿಯೇ ?

ಶ್ರೀ ವೀರೇಂದ್ರ ಪಾಟೀರ್.—ಇಲ್ಲ ಎಷ್ಟು ಪ್ರಮಾಣದ ಹಾನಿಯಾಗಿದೆ ಎನ್ನುವ ಪೂರ್ಣ ವಿಚಾರಗಳು ತಿಳಿದ ಮೇಲೆ ಅವನ್ನು ರೆವೆನ್ಯೂ ಇಲಾಖೆಯವರೊಡನೆ ವಿಚಾರ ಮಾಡುತ್ತೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ನಿಮ್ಮ ಕೈಕೆಳಗಿರತಕ್ಕ ಅಧಿಕಾರಿಗಳಿಗೆ ಸರಕಾರಕ್ಕೆ ವರದಿ ಮಾಡುವಾಗ ರೂಪಾಯಿನಲ್ಲಿ ಎಂಟಾಣೆ ಭಾಗ ಅಥವಾ ಹನ್ನೆರಡಾಣೆ ಭಾಗ ಬೆಳೆಯಾಗಿದೆ ಎಂದು ಮಾತ್ರ ಬರೆಯಬೇಕೆಂದು ಇನ್ಸ್‌ಟ್ರಕ್ಷನ್ನುಗಳನ್ನು ಕೊಡಲಾಗಿದೆಯೇ ?

ಶ್ರೀ ವೀರೇಂದ್ರ ಪಾಟೀರ್.—ಆ ರೀತಿ ಯಾವ ಇನ್ಸ್‌ಟ್ರಕ್ಷನ್ನುಗಳನ್ನು ಕೊಡುವುದಕೆ ಸಾಧ್ಯವಿಲ್ಲ.

ಶ್ರೀ ಎನ್. ರಾಚಯ್ಯ.—ಇಲ್ಲರುವ ತಹಶೀಲ್ದಾರರನ್ನು ಹಾಗೂ ಸಬ್ ಡಿವಿಜನ್ನು ಆಫೀಸರನ್ನು ನಾನೇ ಖುದ್ದಾಗಿ ಕರೆದುಕೊಂಡು ಹೋಗಿ ಬೆಳೆ ನಷ್ಟವಾಗಿರುವುದನ್ನು ತೋರಿಸಿ ಬಂದ್ದು ಸರಕಾರಕ್ಕೆ ಮನವಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀರ್.—ಈಗಾಗಲೇ ಫಸಲು ಎಷ್ಟು ಮಟ್ಟಿಗೆ ನಷ್ಟವಾಗಿದೆ ಎನ್ನುವುದರ ಬಗ್ಗೆ ಹೇಳಿದ್ದೇನೆ. ಯಾವ ಪ್ರಮಾಣದಲ್ಲಾಗಿದೆ ಎನ್ನುವುದನ್ನು ನಮ್ಮ ಅಧಿಕಾರಿಗಳು ನೋಡಿ ಕೊಂಡು ವರದಿ ಮಾಡುತ್ತಾರೆ. ಆಗ ಯಾವ ರೀತಿ ಮಾಡಬೇಕು ಎನ್ನುವುದನ್ನು ವಿಚಾರ ಮಾಡ ಬೇಕು ;

ಶ್ರೀ ಎನ್. ರಾಚಯ್ಯ—ನರ್ ಚಾರ್ಜು ಇತ್ಯಾದಿಗಳಲ್ಲಾದರೂ ರಿಯಾಯತಿಗಳನ್ನು ಕೊಡ ಲಾಗುತ್ತದೆಯೇ ?

---

ndicates that the remarks or speeches have not been revised by the member concerned

ಶ್ರೀ ವೀರೇಂದ್ರ ಪಾಟೀಲ್.—ಇದನ್ನೆಲ್ಲಾ ಪೂರ್ಣವಾಗಿ ವಿಚಾರ ಮಾಡಬೇಕಾಗುತ್ತದೆ.

Principles followed while nominating the Members to the City Improvement Trust Board, Bangalore.

*Q.—523. Sri D. MUNICHINNAPPA (Bangalore South).—

Will the Government be pleased to state :—

(a) the principles followed by them while nominating the present members to the City Improvement Trust Board, Bangalore;

(b) whether it is a fact that the Board has acquried the lands of the Ryots in Bangalore North and South Taluks;

(c) whether they would take action to nominate the Assembly Members of the Bangalore North and South Taluks to the City Improvement Trust Board in order to redress the grievances of the Ryots whose lands have been acquired in that area ?

A.—Sri K. PUTTASWAMY (Minister for Municipal Administration).—

(a) Under Section 4 of the City of Bangalore Improvement Act 1945, the Chairman and six trustees will be appointed by Government and four trustees will be elected by the Corporators of the Corporation of the City of Bangalore out of their own body.

(b) Yes.

(c) This is not considered necessary.

Term of Bangalore City Improvement Trust Board.

*Q.—550. Sri P. VENKATAGIRIYAPPA (Kolar).—

Will the Government be pleased to state :—

(a) when the term of Bangalore City Improvement Trust Board expires;

(b) whether they have nominated trustees in the Board;

(c) what are the qualifications prescribed for the trustees to be nominated in the Trust Board ?

A.—Sri K. PUTTASWAMY (Minister for Municipal Administration.)—

(a) It expired on 9th March 1964.

(b) Yes.

(c) No qualifications have been prescribed.

ಶ್ರೀ ಡಿ. ಮುನಿಚಿನ್ನಪ್ಪ.—ಟ್ರಸ್ಟ್ ಬೋರ್ಡ್‌ನವರು ರೈತರಿಂದ ಜಮೀನನ್ನು ಪಡೆದು ಸೈಟು ಗಳನ್ನು ಮಾಡುವಾಗ ಎಕರೆಯೊಂದಕ್ಕೆ 2,500 ರಿಂದ 5,000 ರೂಪಾಯಿಗಳವರೆಗೆ ಕೊಡುತ್ತಿರುವುದು ನಿಜವೇ ?